ಓ ಎಸ್ 59/2019
ಪಿ ಡಬ್ಲ್ಯೂ: 1

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು
ದಿನಾಂಕ : 25.07.2022

**ಪಾಟೀ ಸವಾಲು : 1 ಮತ್ತು 2ನೇ ಪ್ರತಿವಾದಿಯ ಪರವಾಗಿ ಶ್ರೀ ಎನ್ ಸಿ ಸಿ ವಕೀಲರಿಂದ**

ನಿ ಪಿ 5ರ ಮೂಲ ಕ್ರಯ ಪತ್ರ ಕರ್ನಾಟಕ ಬ್ಯಾಂಕ್ ನಲ್ಲಿ ಸಾಲದ ಭದ್ರತೆಗೆ ಇಟ್ಟಿರುತ್ತೇನೆ. ನಾನು ಮೂಲ ಕ್ರಯಪತ್ರವನ್ನು ಬ್ಯಾಂಕ್ ನಿಂದ ತರಿಸಿಕೊಳ್ಳುವ ಪ್ರಯತ್ನ ಮಾಡಿಲ್ಲವೆಂದರೆ ನನಗೆ ಗೊತ್ತಾಗುವುದಿಲ್ಲ. ನಿ ಪಿ 1 ಮತ್ತು 5ರ ಕ್ರಯ ಪತ್ರಗಳಲ್ಲಿರುವ ಅಂಶಗಳು ಮೂಲ ಕ್ರಯ ಪತ್ರಕ್ಕಿಂತ ವ್ಯತಿರಿಕ್ತವಾಗಿದೆ ಎಂದರೆ ಸರಿಯಲ್ಲ. ನಿ ಪಿ 5ರ ಕ್ರಯ ಪತ್ರ ನೊಂದಣಿ ಆಗುವ ಸಮಯದಲ್ಲಿ ನಾನು ವೈಯಕ್ತಿಕವಾಗಿ ಉಪನೊಂದಣಾಧಿಕಾರಿಯವರ ಕಛೇರಿಗೆ ಹೋಗಿರುವುದಿಲ್ಲ. ನನಗೆ ಕನ್ನಡ ಓದಲು ಮತ್ತು ಬರೆಯಲು ಅಲ್ಪ ಸ್ವಲ್ಪ ಬರುತ್ತದೆ, ಕಷ್ಟಕರವಾದ ಪದಗಳು ಬರುವುದಿಲ್ಲ. ನಿ ಪಿ 5ರಲ್ಲಿರುವ ಕ್ರಯಪತ್ರದಲ್ಲಿರುವ ಅಂಶಗಳನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ನಿ ಪಿ 5ರಲ್ಲಿ ಉಲ್ಲೇಖಿಸಿರುವ ನಂಜುಂಡಯ್ಯನವರು ಮರಿಯಮ್ಮನವರಿಗೆ ಬರೆದುಕೊಟ್ಟ ದಿನಾಂಕ 23.11.1955ರ ವಿಲ್ಲುನಾಮೆಯನ್ನು ನಾನು ನೋಡಿರುವುದಿಲ್ಲ, ನನ್ನ ಅಣ್ಣ ರಾಜೀವ್ ನೋಡಿರಬಹುದು. ರಾಜೀವ್ ಅವರು ಈಗ ಸುಂಟಿಕೊಪ್ಪದಲ್ಲಿದ್ದಾರೆ ಮತ್ತು ಆರೋಗ್ಯವಂತರಾಗಿದ್ದಾರೆ. ನಿ ಡಿ 4ರ ತಿದ್ದುಪಡಿ ವಿಭಾಗ ಪತ್ರದಂತೆ ಸರ್ವೆ ನಂಬರ್ 57/1ರ 1.47 ಎಕರೆ ಜಾಗವು 1ನೇ ಪ್ರತಿವಾದಿಯ ಪಾಲಿಗೆ ಹೋಗಿದೆ ಎಂದರೆ ಸರಿ. 1ನೇ ಪ್ರತಿವಾದಿಯ ಸರ್ವೆ ನಂಬರ್ 57/1ರ ಆಸ್ತಿಗೆ ಹೋಗಲು ದಾವಾ ಸರ್ವೆ ನಂಬರ್ 57/4ರ ಆಸ್ತಿಯ ಮೂಲಕವೇ ಹೋಗಬೇಕು ಎಂದರೆ ಸರಿಯಲ್ಲ. ದಾವಾ ಸರ್ವೆ ನಂಬರ್ 57/4 ಮೂಲತಃ ಸರ್ವೆ ನಂಬರ್ 57/2ರ ಭಾಗವಾಗಿತ್ತು ಎಂದರೆ ಸರಿ. ದಿನಾಂಕ 23.11.1955ರ ನಂಜುಂಡಯ್ಯನವರ ವಿಲ್ಲುನಾಮೆಯಲ್ಲಿ ಸರ್ವೆ ನಂಬರ್ 57/1ಕ್ಕೆ ಸರ್ವೆ ನಂಬರ್ 57/4ರ ಮೂಲಕ ಹಾದುಹೋಗಲು ದಾರಿ ಹಕ್ಕನ್ನು

ಕಾಯ್ದಿರಿಸಿದ್ದಾರೆಂದರೆ ನನಗೆ ಗೊತ್ತಿಲ್ಲ. ನಾನು 1ನೇ ಪ್ರತಿವಾದಿಗೆ ಸರ್ವೆ ನಂಬರ್ 57/4ರ ಮೂಲಕ ಸರ್ವೆ ನಂಬರ್ 57/1ರ ಜಮೀನಿಗೆ ಹೋಗಲು ತೊಂದರೆ ಕೊಡುತ್ತಿದ್ದೇನೆಂದರೆ ಅಲ್ಲಿ ಅಂತಹ ಯಾವುದೇ ದಾರಿ ಇಲ್ಲ ಎನ್ನುತ್ತಾರೆ. ಮುಖ್ಯ ರಸ್ತೆಯಿಂದ ಸರ್ವೆ ನಂಬರ್ 57/1ರ ಜಮೀನಿಗೆ ಹೋಗಲು ಸರ್ವೆ ನಂಬರ್ 57/4ರ ಮೂಲಕ 1955 ರಿಂದಲೂ ದಾರಿ ಅಸ್ತಿತ್ವದಲ್ಲಿರುತ್ತದೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಯು ಸದರಿ ದಾರಿಯ ಹಕ್ಕನ್ನು ಅನುಭವಿಸಬಾರದು ಎನ್ನುವ ಕಾರಣದಿಂದ ಅವರ ವಿರುದ್ಧ ನಾನು ಈ ದಾವೆಯನ್ನು ಸಲ್ಲಿಸಿದ್ದೇನೆಂದರೆ ಸರಿಯಲ್ಲ. ನನ್ನ ಕಣ್ಣಿನ ದೃಷ್ಠಿ ಚೆನ್ನಾಗಿದೆ. ನಾನು ಕನ್ನಡಕವನ್ನು ಬಳಸುತ್ತೇನೆ. ನಿ ಪಿ 23ರ ಕರಾರು ಮೂಲ ಕರಾರು ಅಲ್ಲ ಎಂದರೆ ಸರಿ. ನಿ ಪಿ 23ರ 1 ಮತ್ತು 2ನೇ ಪುಟವನ್ನು ಒಂದೇ ಕಾಗದದ ಎರಡು ಬದಿಗಳಿಗೆ ನಕಲು ಮಾಡಿದ್ದಾರೆಂದರೆ ಇರಬಹುದು. ನಿ ಪಿ 23ನ್ನು ನೋಡಿದಾಗ ಛಾಪಾಕಾಗದವನ್ನು ಯಾರು ಯಾವಾಗ ಎಲ್ಲಿಂದ ಖರೀದಿ ಮಾಡಿದರು ಎಂದು ಗೊತ್ತಾಗುವುದಿಲ್ಲವೆಂದರೆ ನನಗೆ ಗೊತ್ತಿಲ್ಲ. ನಿ ಪಿ 23ರ ಮೂಲ ದಾಖಲೆಯನ್ನು ಹಾಜರುಪಡಿಸಿದರೆ ಛಾಪಾಕಾಗದವನ್ನು ಯಾರು ಯಾವಾಗ ಎಲ್ಲಿಂದ ಖರೀದಿ ಮಾಡಿದರು ಎನ್ನುವ ವಿವರವಿರುತ್ತದೆ ಎಂದರೆ ಸರಿ, ಆದರೆ ಅದರ ಮೂಲ ದಾಖಲೆಯನ್ನು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಇರುತ್ತದೆ. ನಿ ಪಿ 23ರ ಕರಾರು ಪತ್ರದ ದೃಢೀಕೃತ ನಕಲನ್ನು ಮಾನ್ಯ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಡಗು ಯಿಂದ ಪಡೆದುಕೊಂಡು ಹಾಜರುಪಡಿಸಿದ್ದೇನೆಂದರೆ ಸರಿ. ಸದರಿ ಕರಾರು ಪತ್ರವನ್ನು ಮೂಲತಃ ಯಾವ ನ್ಯಾಯಾಲಯದಲ್ಲಿ ಹಾಜರುಪಡಿಸಿದ್ದೆನು ಎಂದು ನನಗೆ ಗೊತ್ತಿಲ್ಲ, ನನ್ನ ಅಣ್ಣನಿಗೆ ಗೊತ್ತಿರುತ್ತದೆ. ನಿ ಪಿ 23ರಲ್ಲಿ ದಿನಾಂಕ, ತಿಂಗಳು ಮತ್ತು ವರ್ಷ ನಮೂದಾಗಿರುವಲ್ಲಿ ಬಿಳಿ ಶಾಹಿಯನ್ನು ಹಾಕಿರುವುದು ಕಂಡುಬರುತ್ತದೆ. ನಿ ಪಿ 23ರ ಶೆಡ್ಯೂಲ್ ನಲ್ಲಿ ಸರ್ವೆ ನಂಬರ್, ವಿಸ್ತೀರ್ಣ ಕ್ಕೆ ಸುತ್ತು ಹಾಕಿ ಬಿಳಿ ಶಾಹಿಯಿಂದ ಅಳಿಸಿರುತ್ತಾರೆ ಎಂದರೆ ಸರಿ. ನಿ ಪಿ 23ರ ಶೆಡ್ಯೂಲ್ ನ ಕ್ರಮ ಸಂಖ್ಯೆ 9ರಲ್ಲಿ ಸರ್ವೆ ನಂಬರ್ 57/2 ತಿದ್ದುಪಡಿ ಆಗಿರುವುದು ಕಂಡುಬರುತ್ತದೆ ಎಂದರೆ ಸರಿ. ನಿ ಪಿ 23 ಮೂಲ ದಾಖಲೆಯ

ದೃಢೀಕೃತ ನಕಲು ಅಲ್ಲವೆಂದರೆ ಸರಿಯಲ್ಲ. ನಿ ಪಿ 23 ಮೂಲ ದಾಖಲೆಯ ನೋಟರಿ ಪ್ರತಿಯ ದೃಢೀಕೃತ ಪ್ರತಿ ಎಂದರೆ ಸರಿ. ನಾನು ನಿ ಪಿ 23ರ ದಾಖಲೆಯನ್ನು ಪ್ರಕರಣಕ್ಕೆ ಅನುಕೂಲವಾಗುವಂತೆ ಸೃಷ್ಟಿಸಿ ಅದರ ನಕಲನ್ನು ಹಾಜರುಪಡಿಸಿದ್ದೇನೆಂದರೆ ಸರಿಯಲ್ಲ. ನಿ ಪಿ 23ರಲ್ಲಿ ನಾನು ಪಕ್ಷಗಾರರಲ್ಲ ಮತ್ತು ರಾಜೀವ್ ರವರು ಪಕ್ಷಗಾರರಾಗಿರುತ್ತಾರೆ ಎಂದರೆ ನನ್ನ ಪರವಾಗಿ ಅವರು ಮಾಡಿರುತ್ತಾರೆ ಆದುದರಿಂದ ನಾನು ಒಪ್ಪುವುದಿಲ್ಲವೆನ್ನುತ್ತಾರೆ. ನಿ ಪಿ 23ರಲ್ಲಿ ನನ್ನ ಪರವಾಗಿ ರಾಜೀವ್ ಅವರು ಖರೀದಿ ಮಾಡಿದ ಬಗ್ಗೆ ಯಾವುದೇ ನಮೂದು ಇರುವುದಿಲ್ಲವೆಂದರೆ ಸರಿ. ನಿ ಪಿ 23ರಲ್ಲಿರುವ ಆಸ್ತಿಯ ಸ್ವಾಧೀನವನ್ನು ಅದೇ ದಿನ ರಾಜೀವ್ ಅವರಿಗೆ ಕೊಟ್ಟ ಬಗ್ಗೆ ನಮೂದು ಇದೆ ಎಂದರೆ ಸರಿ. ನಿ ಪಿ 23ರಲ್ಲಿ 10 ಲಕ್ಷದ ಪೈಕಿ 20,000/- ರೂಪಾಯಿ ಹಣವನ್ನು ಮರಿಯಮ್ಮ ಅವರಿಗೆ ರಾಜೀವ್ ಅವರು ಕೊಟ್ಟಂತೆ ನಮೂದು ಇರುತ್ತದೆ ಎಂದರೆ ಸರಿ. ನಿ ಪಿ 23ರ ಕರಾರು ಪತ್ರದ ಬಗ್ಗೆ ನಿ ಪಿ 5ರ ಕ್ರಯ ಪತ್ರದಲ್ಲಿ ಯಾವುದೇ ನಮೂದು ಇರುವುದಿಲ್ಲವೆಂದರೆ ಸರಿ. ನಿ ಪಿ 5ರಲ್ಲಿ ಕ್ರಯದ ಮೊಬಲಗು 7,50,000/- ರೂಪಾಯಿಗಳನ್ನು ಅದೇ ದಿನ ಮಾರಾಟಗಾರರಿಗೆ ನೀಡಿದ ಬಗ್ಗೆ ನಮೂದು ಇರುತ್ತದೆ ಎಂದರೆ ಸರಿ. ನಿ ಪಿ 23ರಲ್ಲಿ ಹೇಳಿದ 20,000/- ಮುಂಗಡ ಹಣದ ಬಗ್ಗೆ ನಿ ಪಿ 5ರ ಕ್ರಯಪತ್ರದಲ್ಲಿ ನಮೂದು ಇಲ್ಲವೆಂದರೆ ಸರಿ. ನಿ ಪಿ 5ರಲ್ಲಿ ಸದರಿ ಕ್ರಯಪತ್ರದಲ್ಲಿ ಕಾಣಿಸಿದ ಆಸ್ತಿಗಳ ಸ್ವಾಧೀನವನ್ನು ಕ್ರಯ ಪತ್ರ ಆದ ದಿನದಂದು ನಾನು ತೆಗೆದುಕೊಂಡ ಬಗ್ಗೆ ನಮೂದಿಸಲಾಗಿದೆ ಎಂದರೆ ಸರಿ. ನಿ ಪಿ 5ರ ಕ್ರಯಪತ್ರದಲ್ಲಿ ನಿ ಪಿ 23ರ ಕರಾರು ಪತ್ರದಂತೆ ಸ್ವಾಧೀನ ಬಿಟ್ಟುಕೊಟ್ಟಿರುವುದನ್ನು ನಮೂದಿಸಿರುವುದಿಲ್ಲವೆಂದರೆ ಸರಿ. ಮರಿಯಮ್ಮನವರು 3 ನೇ ಪ್ರತಿವಾದಿಗೆ ದಿನಾಂಕ 25.04.1996 ರಂದು ದಾವಾಸ್ತಿಯ ಪೈಕಿ 45 ಸೆಂಟ್ಸ್ ಜಾಗವನ್ನು ಮಾರಾಟ ಮಾಡಿ ಸ್ವಾಧೀನ ಕೊಟ್ಟಿದ್ದರು ಎಂದರೆ ಸರಿಯಲ್ಲ. ಅದನ್ನು ತಪ್ಪಿಸುವ ಸಲುವಾಗಿ ನಿ ಪಿ 23ರ ಕ್ರಯಕರಾರು ಪತ್ರವನ್ನು ಸೃಷ್ಟಿಸಿಕೊಂಡಿದ್ದೇವೆಂದರೆ ಸರಿಯಲ್ಲ. ಆದುದರಿಂದ ನಾನು ನಿ ಪಿ 1, 5 ಮತ್ತು 23ರ ಮೂಲ ದಾಖಲಾತಿಗಳನ್ನು ಮರೆ ಮಾಡಿ ಅವುಗಳ ನಕಲುಗಳನ್ನು

ಹಾಜರುಪಡಿಸಿದ್ದೇನೆಂದರೆ ಸರಿಯಲ್ಲ. ನಿ ಪಿ 24 ರ ಜಿಲ್ಲಾಧಿಕಾರಿಗಳ ಆದೇಶದಲ್ಲಿ ಆರ್ ಎ ನಂಬರ್ 59/2005 ರ ಪ್ರಕರಣದ ಆದೇಶದಂತೆ ಮ್ಯುಟೇಶನ್ ಮಾಡುವಂತೆ ಆದೇಶ ಮಾಡಿದ್ದಾರೆಂದರೆ ನನಗೆ ಹೇಳಲು ಆಗುವುದಿಲ್ಲ. ಈಗ ಸರ್ವೆ ನಂಬರ್ 57/4 ರ ಪೂರ್ತಿ ಆಸ್ತಿ ನನ್ನ ಹೆಸರಿನಲ್ಲಿ ಇದೆ ಎಂದರೆ ಸರಿ. ನಾನು ನಿ ಪಿ 24 ರ ಜಿಲ್ಲಾಧಿಕಾರಿಗಳ ಆದೇಶಕ್ಕೆ ವಿರುದ್ಧವಾಗಿ ನಿ ಪಿ 9 ರಂತೆ ನನ್ನ ಹೆಸರಿಗೆ ಪಹಣಿ ಪತ್ರಿಕೆ ಮಾಡಿಸಿಕೊಂಡಿದ್ದೇನೆಂದರೆ ಸರಿಯಲ್ಲ. 3 ನೇ ಪ್ರತಿವಾದಿಯು ತಾನು ಖರೀದಿ ಮಾಡಿದ ಸರ್ವೆ ನಂಬರ್ 57/2 ರ 45 ಸೆಂಟ್ ಜಾಗವನ್ನು 1 ನೇ ಪ್ರತಿವಾದಿಗೆ ಮಾರಾಟ ಮಾಡಲು ಕ್ರಯಕರಾರು ಪತ್ರ ಮಾಡಿದ್ದಾರೆಂದರೆ ನನಗೆ ಗೊತ್ತಿಲ್ಲ. ನನಗೆ ಸದರಿ ಕ್ರಯಕರಾರು ಪತ್ರದ ಬಗ್ಗೆ ಗೊತ್ತಿದ್ದರೂ ಕೂಡ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ದಾವೆಯಲ್ಲಿ ಸಲ್ಲಿಸಿದ್ದೇನೆಂದರೆ ಸರಿಯಲ್ಲ. ಆರ್ ಎಸ್ ಎ ನಂಬರ್ 2753/2011 ರ ಪ್ರಕರಣ ವಿಚಾರಣೆಗೆ ಬಾಕಿ ಇರುತ್ತದೆ ಎಂದರೆ ಸರಿ. ಸದರಿ ಪ್ರಕರಣವು ಇನ್ನೂ ಅಂತಿಮವಾಗಿ ನಿರ್ಧಾರ ಆಗಿರದೇ ಇರುವುದರಿಂದ ನನಗೆ ಈ ದಾವೆಯಲ್ಲಿ ಕೇಳಿದ ಪರಿಹಾರ ಪಡೆಯಲು ಅಧಿಕಾರವಿಲ್ಲವೆಂದರೆ ಸರಿಯಲ್ಲ. ನಾನು ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಮತ್ತು ಅವರಿಗೆ ಸೇರಿದ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ದಾಖಲಾತಿಗಳನ್ನು ಸೃಷ್ಟಿಸಿ ಸುಳ್ಳು ದಾವೆಯನ್ನು ಸಲ್ಲಿಸಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆ: ಇರುವುದಿಲ್ಲ**

(ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ

Sd/-

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳು,
ಸೋಮವಾರಪೇಟೆ.